ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರಾಜ್ಯದಲ್ಲಿನ ರಸ್ತೆ ಭೂಮಿಯಲ್ಲಿನ ಅನಧಿಕೃತ ಕಟ್ಟಡಗಳನ್ನು ತೆಗೆದು ರಸ್ತೆ ವಿಸ್ತರಿಸಲಾಗುತ್ತಿದೆ.

ಆ) ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳಲ್ಲಿ ಪ್ರಮುಖವಾದ ಪಟ್ಟಣಗಳ ಮಿತಿಯಲ್ಲಿ ಪ್ರಾರಂಭಿಸಲಾಗಿದೆ.

ಇ) ಅನಧಿಕೃತ ಕಟ್ಟಡ ಗುರುತಿಸುವ ಕಾರ್ಯ ಕೈಗೊಳ್ಳಲಾಗಿದೆ.

ಈ) ತೆರವುಗೊಳಿಸಿದಲ್ಲಿ ನಷ್ಟದ ಬಗ್ಗೆ ವಿವರ ಲಭ್ಯವಾಗುತ್ತದೆ.

ಉ) ಇಲ್ಲ.

ಚಾಮರಾಜ ನಗರದಲ್ಲಿ ಹೊಸದಾಗಿ ಲೋಕೋಪಯೋಗಿ ಇಲಾಖೆಗೆ ಸೇರಿಸಲಾದ ರಸ್ತೆಗಳು

1785 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರದಲ್ಲಿ ಹೊಸದಾಗಿ ಲೋಕೋಪಯೋಗಿ ಇಲಾಖೆಗೆ ಸೇರಿಸಿದ ರಸ್ತೆಗಳು ಎಷ್ಟು?

ಆ) ಈ ರಸ್ತೆಗಳ ದುರಸ್ತಿಯ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಪ್ರತಿ ಶಾಸನ ಸಭಾ ಕ್ಷೇತ್ರಗಳಲ್ಲಿ ಎಷ್ಟು ರಸ್ತೆಗಳ ಕಾಮಗಾರಿಯನ್ನು ಕೈಗೊಳ್ಳಲಾಗಿದೆ?

ಈ) ಚಾಮರಾಜನಗರದಲ್ಲಿ ಹಲವಾರು ವರ್ಷಗಳಿಂದ ಕಟ್ಟಡಗಳ ವಾರ್ಷಿಕ ದುರಸ್ತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಚಾಮರಾಜ ನಗರವನ್ನು ಹೊಸ ಜಿಲ್ಲೆಯನ್ನಾಗಿ ಮಾಡಿದ ನಂತರ ಅವಶ್ಯವಿರುವ ಕಟ್ಟಡಗಳ ನಿರ್ಮಾಣಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಚಾಮರಾಜನಗರ ತಾಲ್ಲೂಕಿನಲ್ಲಿ ಸಂಖ್ಯೆ :9 (ಯು.ಜಿ.ಆರ್) ರಸ್ತೆಗಳನ್ನು 1992ರಲ್ಲಿ ಸೇರಿಸಲಾಗಿದೆ.

ಆ) ಲಭ್ಯ ಮಾಡಿರುವ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ.

ಇ) ಸಾಮಾನ್ಯವಾಗಿ 1 ರಿಂದ 14ರ ವರೆಗೆ ಕೈಗೊಳ್ಳಲಾಗುತ್ತಿದೆ.

ಈ) ಬಂದಿದೆ.

ಉ) ಇದೀಗ ಹೊಸ ಜಿಲ್ಲೆಯಾಗಿ ಘೋಷಿಸಿದ್ದು, ಮಂಜೂರಾದ ಕಾಮಗಾರಿಗಳನ್ನು ಮುಂದುವರೆಸಲಾಗುತ್ತಿದೆ.

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿಗಳು, ವಿಧಾನಸಭೆ ಅಧ್ಯಕ್ಷರೇ, ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಮೈಸೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ವಿಧೇಯಕ 1998ಅನ್ನು ಸಭೆಯ ಮುಂದಿಡುತ್ತೇನೆ.

ಮೈಸೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ವಿಧೇಯಕ, 1998

(1998ರ ವಿಧಾನ ಪರಿಷತ್ತು ವಿಧೇಯಕ ಸಂಖ್ಯೆ 1)

(ವಿಧಾನ ಪರಿಷತ್ತಿನಲ್ಲಿ ಅಂಗೀಕಾರವಾದಂತೆ)

ಮೈಸೂರು ಅರಮನೆ ಮತ್ತು ಅದರ ಸುತ್ತಮುತ್ತಲಿನ ಖಾಲಿ ಜಾಗವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಆರ್ಜಿಸುವುದಕ್ಕೆ, ವರ್ಗಾವಣೆ ಮಾಡುವುದಕ್ಕೆ ಮತ್ತು ಅದರ ಸಂರಕ್ಷಣೆಗೆ ಹಾಗೂ ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಉಪಬಂಧ ಕಲ್ಪಿಸುವ ವಿಧೇಯಕ.

ವಿಶೇಷವಾಗಿ ಕರ್ನಾಟಕ ರಾಜ್ಯದ ಮತ್ತು ಸಾಮಾನ್ಯವಾಗಿ ರಾಷ್ಟ್ರದ ವಿಶಿಷ್ಟ ಐತಿಹಾಸಿಕ ಹಾಗೂ ವಾಸ್ತುಶಿಲ್ಪ ಪರಂಪರೆಯ ಪ್ರತೀಕವಾದ, ಮೈಸೂರು ಅರಮನೆಯೆಂದು ಪ್ರಖ್ಯಾತವಾಗಿರುವ ಮೈಸೂರಿನಲ್ಲಿರುವ ಅರಮನೆ ಹಾಗೂ ಖಾಲಿ ಜಾಗ, ಉದ್ಯಾನ ಮತ್ತು ತೋಟವೂ ಸೇರಿದಂತೆ ಅದರ ನಿಕಟ ಪರಿಸರ, ರಾಜ ಸಿಂಹಾಸನಗಳು, ರಾಜ ಮುಕುಟಗಳು, ಅಂಬಾರಿ, ರಾಜರ ಉಡುಗೆ ತೊಡುಗೆಗಳು ಮತ್ತು ಆಭರಣಗಳೂ ಸೇರಿದಂತೆ ರಾಜ ಭಂಡಾರ ಮತ್ತು ಎಲ್ಲ ಕಲಾಕೃತಿಗಳು, ರಾಜ ಲಾಂಛನಗಳು, ವರ್ಣಚಿತ್ರಗಳು, ಶಿಲ್ಪಗಳು ಮತ್ತು ಪೀಠೋಪಕರಣಗಳು ಅದರ ಸಾರ್ವತ್ರಿಕ ಸ್ವರೂಪವನ್ನು ಕಾಪಾಡಿಕೊಂಡು ಬರುವ ಸಲುವಾಗಿ, ಸಾರ್ವಜನಿಕ ಉದ್ದೇಶವನ್ನು ಸಾಧಿಸುವ ದಿಸೆಯಲ್ಲಿ, ಸಾಂಸ್ಕೃತಿಕ ಪರಂಪರೆಗೆ ವಿಶ್ವಾದ್ಯಂತ ಪ್ರಖ್ಯಾತಿ ಪಡೆದಿರುವ ಕರ್ನಾಟಕದ ದಸರಾ ಉತ್ಸವದ ಕೇಂದ್ರವಾಗಿ ಮತ್ತು ವೈಭವ ಮತ್ತು ಭವ್ಯತೆಯ ಸ್ಮಾರಕವನ್ನಾಗಿ ಅದನ್ನು ಸಂರಕ್ಷಿಸುವುದಕ್ಕೆ, ರಾಜ ಭಂಡಾರ, ವರ್ಣಚಿತ್ರಗಳು ಮತ್ತು ಕಲಾ ಕೃತಿಗಳು ಹಾಗೂ ಶಿಲ್ಪಗಳ ಅನನ್ಯ ವಸ್ತು ಸಂಗ್ರಹಾಲಯವನ್ನಾಗಿ ಅದನ್ನು ಅಭಿವೃದ್ಧಿಗೊಳಿಸುವುದಕ್ಕೆ ಮತ್ತು ಉದ್ಯಾನ ಮತ್ತು ತೋಟವನ್ನು ಸಂರಕ್ಷಿಸುವುದಕ್ಕೆ ಹಾಗೂ ಖಾಲಿ ಜಾಗವನ್ನು ತೋಟಗಾರಿಕಾ ಉದ್ಯಾನವನ್ನಾಗಿ ಅಭಿವೃದ್ಧಿಗೊಳಿಸುವುದಕ್ಕೆ ಅಗತ್ಯವಾಗಿರುವುದರಿಂದ ಮತ್ತು ಆ ಕಾರಣಕ್ಕಾಗಿ ಇದನ್ನು ಕಾನೂನುಬದ್ಧವಾಗಿ ಆರ್ಜಿಸಲು ಮತ್ತು ವರ್ಗಾವಣೆ ಮಾಡಲು ಉಪಬಂಧ ಕಲ್ಪಿಸಬೇಕಾಗಿರುವುದರಿಂದ;

ನಗರ ಭೂ (ಮಿತಿ ಮತ್ತು ನಿಯಂತ್ರಣ) ಅಧಿನಿಮಯ, 1976ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರವು ಮೈಸೂರು ಅರಮನೆ ಮತ್ತು ಅದರ ಸುತ್ತಮುತ್ತಲಿನ ಭೂಮಿಯು ಸದರಿ ಅಧಿನಿಯಮದ